# ಚಾರ್ಟರ್ಡ್ ಸಹಕಾರಿ ಬ್ಯಾಂಕ್ ನಿಯಮಿತ
# CHARTERED SAHAKARI BANK NIYAMITHA

ನಂ. 1, 1ನೇ ಮುಖ್ಯ ರಸ್ತೆ, 1ನೇ ಬ್ಲಾಕ್, ಕೋರಮಂಗಲ, ಬೆಂಗಳೂರು - 560034
ದೂರವಾಣಿ : 080-25526288 ವೆಬ್‌ಸೈಟ್ : www.csbank.in

## ಪ್ರಕಟಣೆ

---

**"ಬ್ಯಾಂಕಿನ ವಿವಿಧ ಹುದ್ದೆಗಳ ಭರ್ತಿಗಾಗಿ ಅರ್ಜಿ ಆಹ್ವಾನ"**

---

1) **ಉಪ ಪ್ರಧಾನ ವ್ಯವಸ್ಥಾಪಕರು : 1 ಹುದ್ದೆ**
ವಿದ್ಯಾರ್ಹತೆ : ಅಂಗೀಕೃತ ವಿಶ್ವವಿದ್ಯಾನಿಲಯದಿಂದ ಪ್ರಥಮ ದರ್ಜೆಯಲ್ಲಿ ಎಂ. ಕಾಂ. / ಎಂ. ಬಿ. ಎ. ( ಫೈನಾನ್ಸ್) ಅಥವಾ ಸಿ.ಎ.
ಅನುಭವ : ಬ್ಯಾಂಕಿಂಗ್ ಕ್ಷೇತ್ರದಲ್ಲಿ ವ್ಯವಸ್ಥಾಪಕರ ಹುದ್ದೆ ಹಾಗೂ ಮೇಲ್ಪಟ್ಟ ಹುದ್ದೆಯಲ್ಲಿ ಕನಿಷ್ಟ 10 ವರ್ಷಗಳ ಅನುಭವ ಹೊಂದಿರಬೇಕು.
ವೇತನ ಶ್ರೇಣಿ : ರೂ. 40050-1050-45300-1200-52500-1350-56550 ಹಾಗೂ ಭತ್ಯೆಗಳು
ವಯೋಮಿತಿ : ಗರಿಷ್ಟ 45 ವರ್ಷಗಳು

2) **ವ್ಯವಸ್ಥಾಪಕರು : 1 ಹುದ್ದೆ**
ವಿದ್ಯಾರ್ಹತೆ : ಅಂಗೀಕೃತ ವಿಶ್ವವಿದ್ಯಾನಿಲಯದಿಂದ ಬಿ. ಕಾಂ. ನಲ್ಲಿ ಕನಿಷ್ಟ ಪ್ರಥಮ ದರ್ಜೆಯಲ್ಲಿ ಉತ್ತೀರ್ಣ
ಅನುಭವ : ಬ್ಯಾಂಕಿಂಗ್ ಕ್ಷೇತ್ರದಲ್ಲಿ ವ್ಯವಸ್ಥಾಪಕರ ಹುದ್ದೆ ಹಾಗೂ ಮೇಲ್ಪಟ್ಟ ಹುದ್ದೆಯಲ್ಲಿ ಕನಿಷ್ಟ 5 ವರ್ಷಗಳ ಅನುಭವ ಹೊಂದಿರಬೇಕು.
ವೇತನ ಶ್ರೇಣಿ : ರೂ. 30400-800-33600-900-39000-1050-45300-1200-51300 ಹಾಗೂ ಭತ್ಯೆಗಳು

3) **ಕಿರಿಯ ಸಹಾಯಕರು : 4 ಹುದ್ದೆಗಳು**
ವಿದ್ಯಾರ್ಹತೆ : ಅಂಗೀಕೃತ ವಿಶ್ವವಿದ್ಯಾನಿಲಯದಿಂದ ಬಿ. ಕಾಂ. ನಲ್ಲಿ ಕನಿಷ್ಟ ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣ
ವೇತನ ಶ್ರೇಣಿ : ರೂ. 20000-500-21000-600- 24600-700- 28800 - 800 - 33600 - 900-36300 ಹಾಗೂ ಭತ್ಯೆಗಳು

4) **ಚಾಲಕ ಕಂ ಅಟೆಂಡರ್ : 1 ಹುದ್ದೆ**
ವಿದ್ಯಾರ್ಹತೆ : ಎಸ್‌ಎಸ್‌ಎಲ್‌ಸಿ ಯಲ್ಲಿ ಉತ್ತೀರ್ಣರಾಗಿದ್ದು ಲಘು ವಾಹನ ಚಾಲನೆಯ ಪರವಾನಗಿ ಹೊಂದಿರಬೇಕು.
ವೇತನ ಶ್ರೇಣಿ : 14550-350-15600-400-17200-450- 19000-500-21000 - 600- 24600 - 700 - 26700 ಹಾಗೂ ಭತ್ಯೆಗಳು

1) **ವಯೋಮಿತಿ** : ದಿನಾಂಕ 15-11-2017ರಲ್ಲಿದ್ದಂತೆ ಹುದ್ದೆಗಳ ಕ್ರಮ ಸಂಖ್ಯೆ 2, 3 ಹಾಗೂ 4ಕ್ಕೆ ಕನಿಷ್ಟ ವಯೋಮಿತಿ 18 ವರ್ಷ ಹಾಗೂ ಗರಿಷ್ಟ ವಯೋಮಿತಿಯು

ಎ) ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗ / ಪ್ರವರ್ಗ -1 ರವರಿಗೆ 40 ವರ್ಷಗಳು
ಬಿ) ಹಿಂದುಳಿದ ಜಾತಿ ಮತ್ತು ಹಿಂದುಳಿದ ವರ್ಗದವರಿಗೆ 38 ವರ್ಷಗಳು
ಸಿ) ಇತರೆ ಅಭ್ಯರ್ಥಿಗಳಿಗೆ 35 ವರ್ಷಗಳು
ಎ ಮತ್ತು ಬಿ ಗುಂಪಿನ ಅಭ್ಯರ್ಥಿಗಳು ಜಾತಿ ಪ್ರಮಾಣ ಪತ್ರ ಲಗತ್ತಿಸತಕ್ಕದ್ದು

2) **ಅಗತ್ಯ ಅರ್ಹತೆ :** ಅಭ್ಯರ್ಥಿಗಳು ಕನ್ನಡ ಓದಲು ಮತ್ತು ಬರೆಯಲು ಹಾಗೂ ಕಂಪ್ಯೂಟರ್ ಜ್ಞಾನ ಹೊಂದಿರಬೇಕು.

3) **ಅರ್ಜಿ ಸಲ್ಲಿಕೆಯ ವಿಧಾನ ಮತ್ತು ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ**
ಅರ್ಹ ಅಭ್ಯರ್ಥಿಗಳು ಬ್ಯಾಂಕಿನ ವೆಬ್‌ಸೈಟ್ www.csbank.in ನಿಂದ ಲೋಡ್ ಮಾಡಿದ ಅರ್ಜಿಯನ್ನು ಭರ್ತಿ ಮಾಡಿ ತಮ್ಮ ಇತ್ತೀಚಿನ ಭಾವ ಚಿತ್ರದೊಂದಿಗೆ ಸಂಬಂಧಿಸಿದ ಎಲ್ಲಾ ವರ್ಷಗಳ ಪದವಿ ಅಂಕ ಪಟ್ಟಿ , ಪ್ರಮಾಣ ಪತ್ರ, ಹುಟ್ಟಿದ ತಾರೀಖಿನ ದೃಢೀಕರಣಗಳ ನಕಲು ಮತ್ತು ಅನುಭವ ಪತ್ರಗಳನ್ನು ಹಾಗೂ ಅರ್ಜಿ ಶುಲ್ಕವನ್ನು ಪಾವತಿ ಮಾಡಿರುವ ಡಿ ಡಿ ಯೊಂದಿಗೆ ಲಗತ್ತಿಸಿ ಲಕೋಟೆ ಮೇಲೆ .................. ಹುದ್ದೆಗಾಗಿ ಅರ್ಜಿ ಎಂದು ನಮೂದಿಸಿ ದಿನಾಂಕ 15-11-2017ರಂದು ಸಂಜೆ 5.00 ಗಂಟೆಯೊಳಗೆ ಅಥವಾ ಅದಕ್ಕೂ ಮೊದಲು ತಲುಪುವಂತೆ ಮೇಲ್ಕಂಡ ವಿಳಾಸಕ್ಕೆ ಖುದ್ದಾಗಿ ಅಥವಾ ಅಂಚೆಯ ಮೂಲಕ ತಲುಪಿಸಬೇಕು. ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಅಭ್ಯರ್ಥಿಯು ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ಅರ್ಜಿಗೆ ಅಂಟಿಸಿ ಭಾವಚಿತ್ರದ ಮೇಲೆ ಕಪ್ಪು ಶಾಹಿಯ ಪೆನ್ನಿನಲ್ಲಿ ಸಹಿ ಮಾಡಿ ಸಲ್ಲಿಸುವುದು ಹಾಗೂ ಎರಡು ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ಅರ್ಜಿ ಜೊತೆ ಲಗತ್ತಿಸುವುದು.

4) **ಲಿಖಿತ ಪರೀಕ್ಷೆ ಮತ್ತು ಕರೆ ಪತ್ರಗಳು** : ಲಿಖಿತ ಪರೀಕ್ಷೆಗೆ ಹಾಜರಾಗಲು ಅರ್ಹ ಅಭ್ಯರ್ಥಿಗಳಿಗೆ ಕರೆ ಪತ್ರಗಳನ್ನು ಕಳುಹಿಸಲಾಗುವುದು. ಲಿಖಿತ ಪರೀಕ್ಷೆ ಮತ್ತು ಸಂದರ್ಶನ ನಡೆಯುವ ಸ್ಥಳ, ದಿನಾಂಕ ಮತ್ತು ವೇಳೆ ಇವುಗಳ ವಿವರಗಳನ್ನು ಪ್ರತ್ಯೇಕವಾಗಿ ತಿಳಿಸಲಾಗುವುದು. ಅರ್ಹ ಅಭ್ಯರ್ಥಿಗಳು ಕನ್ನಡ, ಆಂಗ್ಲ ಭಾಷೆ, ಸಾಮಾನ್ಯ ಜ್ಞಾನ, ಭಾರತದ ಸಂವಿಧಾನ, ಬ್ಯಾಂಕಿಂಗ್ ಜ್ಞಾನ ಹಾಗೂ ಗಣಿತ ಶಾಸ್ತ್ರ ವಿಷಯಗಳಿಗೆ ಸಂಬಂಧಪಟ್ಟ ಲಿಖಿತ ಪರೀಕ್ಷೆ ಬರೆಯಬೇಕಾಗಿರುತ್ತದೆ. ಪರೀಕ್ಷೆಯಲ್ಲಿ ಅವರ ಸಾಧನೆಯ ಆಧಾರದ ಮೇಲೆ ಬ್ಯಾಂಕಿನ ಮಾನದಂಡದಂತೆ ಸಂದರ್ಶನ ಪತ್ರಗಳನ್ನು ಕಳುಹಿಸಲಾಗುವುದು ಪರೀಕ್ಷೆಯಲ್ಲಿ ಮತ್ತು ಸಂದರ್ಶನದಲ್ಲಿ ಅಭ್ಯರ್ಥಿಗಳ ಸಾಧನೆ ಆಧರಿಸಿ ಮತ್ತು ಅನುಭವ / ಹೆಚ್ಚುವರಿ ವಿದ್ಯಾರ್ಹತೆ ಆಧರಿಸಿ ಆಯ್ಕೆ ಮಾಡಲಾಗುವುದು.

**ಸಾಮಾನ್ಯ ಸೂಚನೆಗಳು :**

ಎ) ನೇಮಕಾತಿ ಅರ್ಜಿ ಶುಲ್ಕ ರೂ. 300/- ರ ಡಿ.ಡಿ.ಯನ್ನು **ಚಾರ್ಟರ್ಡ್ ಸಹಕಾರಿ ಬ್ಯಾಂಕ್ ನಿಯಮಿತ , ಬೆಂಗಳೂರು** ಇವರ ಹೆಸರಿಗೆ ಪಡೆದು ಲಗತ್ತಿಸುವುದು.

ಬಿ) ಅಂಚೆ ಇಲಾಖೆಯಿಂದ ಅಥವಾ ಇನ್ನಾವುದೇ ಕಾರಣದಿಂದ ಅರ್ಜಿಗಳು ತಡವಾದರೆ ಅಥವಾ ತಲುಪದಿದ್ದರೆ ಬ್ಯಾಂಕು ಜವಾಬ್ದಾರಿಯಾಗಿರುವುದಿಲ್ಲ

ಸಿ) ಸರ್ಕಾರಿ ಸಂಸ್ಥೆಗಳು ಅಥವಾ ಸರ್ಕಾರಿ ಸ್ವಾಮ್ಯದ ಉದ್ಯಮಗಳಲ್ಲಿ ಅಥವಾ ಇನ್ನಾವುದೇ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ಅಭ್ಯರ್ಥಿಗಳು ಸಂದರ್ಶನದ ಸಂದರ್ಭದಲ್ಲಿ ನಿರಪೇಕ್ಷಣಾ ಪತ್ರವನ್ನು ಸಲ್ಲಿಸಬೇಕು. ಸಂದರ್ಶನಕ್ಕೆ ಅರ್ಹರಾದ ಅಭ್ಯರ್ಥಿಗಳು ಅರ್ಜಿಯ ಜೊತೆ ಲಗತ್ತಿಸಿದ ಮೂಲ ಪ್ರಮಾಣ ಪತ್ರಗಳನ್ನು ಪರಿಶೀಲನೆಗೆ ಹಾಜರುಪಡಿಸಬೇಕು.ಅನಂತರ ಯಾವುದೇ ಪ್ರಮಾಣ ಪತ್ರಗಳನ್ನು ಪರಿಗಣಿಸಲಾಗುವುದಿಲ್ಲ

ಡಿ) ಅಭ್ಯರ್ಥಿಗಳು ಪರೀಕ್ಷೆಗೆ / ಸಂದರ್ಶನಕ್ಕೆ ತಮ್ಮ ಸ್ವಂತ ಖರ್ಚಿನಲ್ಲಿ ಹಾಜರಾಗಬೇಕಾಗಿರುತ್ತದೆ.

ಇ) ಅಭ್ಯರ್ಥಿಗಳ ಅರ್ಹತೆ, ಲಿಖಿತ ಪರೀಕ್ಷೆ, ಸಂದರ್ಶನ ಅಥವಾ ಅಭ್ಯರ್ಥಿಗಳ ಆಯ್ಕೆಯ ವಿಚಾರದಲ್ಲಿ ಸಿಬ್ಬಂದಿ ನೇಮಕಾತಿ ಸಮಿತಿಯ ತೀರ್ಮಾನವೇ ಅಂತಿಮ. ಈ ಕುರಿತು ಪತ್ರ ವ್ಯವಹಾರವನ್ನು ಮಾನ್ಯ ಮಾಡುವುದಿಲ್ಲ. ಪರಿಗಣಿಸಲಾಗದ ಅರ್ಜಿಗಳ ಬಗ್ಗೆ ಯಾವ ಮಾಹಿತಿಗಳನ್ನು ನೀಡಲಾಗುವುದಿಲ್ಲ

ಎಫ್) ಅರ್ಹ ಅಭ್ಯರ್ಥಿಯು ಅರ್ಜಿಯ ಜೊತೆಗೆ ನೀಡಬೇಕಾದ ಅಗತ್ಯ ಮಾಹಿತಿಗಳನ್ನು ನಿಗದಿಪಡಿಸಿದ ದಿನಾಂಕ ಮತ್ತು ವೇಳೆಯೊಳಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಬೇಕು. ಯಾವುದಾದರೂ ವಿಚಾರಣೆ ಮಾಡಬೇಕಾದಲ್ಲಿ ಬ್ಯಾಂಕಿನ ದೂರವಾಣಿಗೆ (080-25526288 ) ಕರೆ ಮಾಡಿ ವಿವರಗಳನ್ನು ಪಡೆಯಬಹುದು.

ಜಿ) ಯಾವುದೇ ಕಾರಣಕ್ಕೂ ಒಮ್ಮೆ ಪಾವತಿಯಾದ ಅರ್ಜಿ ಶುಲ್ಕವನ್ನು ಹಿಂತಿರುಗಿಸಲಾಗುವುದಿಲ್ಲ

ಹೆಚ್) ಅನುಸೂಚಿಯಲ್ಲಿ ತಿಳಿಸಿರುವ ಹುದ್ದೆಗಳ ಸಂಖ್ಯೆ ಮತ್ತು ವರ್ಗೀಕರಣವು ಅನಿವಾರ್ಯ ಸಂದರ್ಭದಲ್ಲಿ ಬದಲಾವಣೆಗೆ ಒಳಪಟ್ಟಿರುತ್ತದೆ. ಈ ನೇಮಕಾತಿ ಪ್ರಕಟಣೆಯನ್ನು ಯಾವುದೇ ಹಂತದಲ್ಲಿ ಯಾವುದೇ ಕಾರಣ ನೀಡದೇ / ಹಿಂದಕ್ಕೆ ಪಡೆಯುವ / ರದ್ದು ಪಡಿಸುವ ಅಧಿಕಾರವನ್ನು ಬ್ಯಾಂಕಿನ ನೇಮಕಾತಿ ಸಮಿತಿಯು ಹೊಂದಿರುತ್ತದೆ. ಇಂತಹ ಸಂದರ್ಭದಲ್ಲಿ ಅರ್ಜಿ ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ ಅಥವಾ ಇನ್ನಾವುದೇ ನೇಮಕಾತಿಗೆ ಹೊಂದಾಣಿಕೆ ಮಾಡಿಕೊಳ್ಳಲಾಗುವುದಿಲ್ಲ

ಐ) ಹುದ್ದೆಗೆ ಆಯ್ಕೆಯಾದ ಅಭ್ಯರ್ಥಿಗಳು ಬ್ಯಾಂಕಿನ ಹಾಲಿ ಅಥವಾ ಮುಂದೆ ಪ್ರಾರಂಭಿಸುವ ಯಾವುದೇ ಶಾಖೆ / ಕಛೇರಿಯಲ್ಲಿ ಕೆಲಸ ಮಾಡಲು ಸಿದ್ಧರಿರಬೇಕು.

ಜೆ) ಅಭ್ಯರ್ಥಿಗಳು ತಪ್ಪು ಮಾಹಿತಿಯನ್ನು ನೀಡಿ ಅರ್ಜಿ ಸಲ್ಲಿಸಿದ್ದಲ್ಲಿ ಹಾಗೂ ಅಪೂರ್ಣ ಮಾಹಿತಿ ನೀಡಿದ್ದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಕೆ) ಆಯ್ಕೆಯಾದ ಅಭ್ಯರ್ಥಿಗಳನ್ನು ಒಂದು ವರ್ಷ ಅವಧಿಗೆ ಪ್ರೊಬೇಷನರಿ ಆಧಾರದಲ್ಲಿ ನೇಮಿಸಿಕೊಳ್ಳಲಾಗುವುದು. ಈ ಅವಧಿಯನ್ನು ತೃಪ್ತಿಕರವಾಗಿ ಮುಗಿಸಿದ ನಂತರ ಬ್ಯಾಂಕಿನ ನಿಯಮಾವಳಿಗೆ ಒಳಪಟ್ಟು ಹುದ್ದೆಯಲ್ಲಿ ಮುಂದುವರೆಸಲಾಗುವುದು.

ಎಲ್) ಅಭ್ಯರ್ಥಿಗಳು ಭಾರತೀಯ ನಾಗರಿಕರಾಗಿಬೇಕು, ಕನ್ನಡ ಭಾಷೆಯಲ್ಲಿ ಓದಲು, ಬರೆಯಲು ಹಾಗೂ ಮಾತನಾಡಲು ಬಲ್ಲವರಾಗಿರಬೇಕು.

ನೇಮಕಾತಿ ಸಮಿತಿ ಆದೇಶದ ಮೇರೆಗೆ
ಸಹಿ/-
ಸಮಿತಿ ಕಾರ್ಯದರ್ಶಿ

ಸ್ಥಳ : ಬೆಂಗಳೂರು
ದಿನಾಂಕ : 25-10-2017

# ಚಾರ್ಟರ್ಡ್ ಸಹಕಾರಿ ಬ್ಯಾಂಕ್ ನಿಯಮಿತ
# CHARTERED SAHAKARI BANK NIYAMITHA

ನಂ. 1, 1ನೇ ಮುಖ್ಯ ರಸ್ತೆ, 1ನೇ ಬ್ಲಾಕ್, ಕೋರಮಂಗಲ, ಬೆಂಗಳೂರು - 560034

**.................................................... ಹುದ್ದೆಗಾಗಿ ಅರ್ಜಿ**

ಮಾನ್ಯ ಸದಸ್ಯ ಕಾರ್ಯದರ್ಶಿಯವರಿಗೆ,
ನೇಮಕಾತಿ ಸಮಿತಿ
ಚಾರ್ಟರ್ಡ್ ಸಹಕಾರಿ ಬ್ಯಾಂಕ್ ನಿಯಮಿತ
ಕೋರಮಂಗಲ
ಬೆಂಗಳೂರು - 560034

ಭಾವಚಿತ್ರವನ್ನು ಅಂಟಿಸಿ ಕಪ್ಪು ಶಾಹಿಯಲ್ಲಿ ಸಹಿ ಮಾಡುವುದು

| | | | | | | |
|---|---|---|---|---|---|---|
| 1ಎ) | ಅರ್ಜಿದಾರರ ಹೆಸರು | | | | | |
| ಬಿ) | ತಂದೆಯ / ಗಂಡನ ಹೆಸರು | | | | | |
| ಸಿ) | ಹುಟ್ಟಿದ ದಿನಾಂಕ | | | | | |
| ಡಿ) | ಲಿಂಗ | ಗಂಡು / ಹೆಣ್ಣು | | | | |
| 2ಎ) | ಖಾಯಂ ವಿಳಾಸ | | | | | |
| ಬಿ) | ವಾಸದ ವಿಳಾಸ | | | | | |
| ಸಿ) | ದೂರವಾಣಿ ಸಂಖ್ಯೆ | ಇ-ಮೇಲ್ ಐಡಿ:......................................................................... <br> ಮೊಬೈಲ್ ನಂ.............................................................................. | | | | |
| 3) | ವಿವಾಹಿತ / ಅವಿವಾಹಿತ | | | | | |
| 4) | ಧರ್ಮ ಮತ್ತು ಜಾತಿ <br> ಎ)ಓ.ಬಿ.ಸಿ./ ಪ.ಜಾತಿ/ ಪ.ಪಂಗಡ <br> (ಪ್ರಮಾಣ ಪತ್ರ ಲಗತ್ತಿಸಿ) | | | | | |
| 5) | ವಿದ್ಯಾರ್ಹತೆ <br> (ಅಂಕಪಟ್ಟಿ ಲಗತ್ತಿಸಿ) | ವರ್ಗ | ವರ್ಷ | ಗರಿಷ್ಟ ಅಂಕ | ಗಳಿಸಿದ ಅಂಕ | ಶೇಕಡಾ (%) |
| | ಎಸ್.ಎಸ್.ಎಲ್.ಸಿ. | | | | | |
| | ಪಿ.ಯು.ಸಿ. | | | | | |
| | ಪದವಿ (ಅಂತಿಮ) | | | | | |
| | ಸ್ನಾತಕೋತ್ತರ ಪದವಿ | | | | | |
| | ಇತರೆ | | | | | |

| | | | | |
|---|---|---|---|---|
| 6.ಎ) | ಭಾಷಾ ಮಾಧ್ಯಮ | | | |
| ಬಿ) | ಮಾತೃ ಭಾಷೆ | | | |
| | ಅರಿತ ಭಾಷೆಗಳು | ಓದಲು | ಬರೆಯಲು | ಮಾತನಾಡಲು |
| | 1) | | | |
| | 2) | | | |
| | 3) | | | |
| 7. | ಇತರೆ ನೌಕರಿ / ಹೆಚ್ಚುವರಿ ಅನುಭವಗಳು | | | |
| | 1) ಬ್ಯಾಂಕಿಂಗ್ ಕ್ಷೇತ್ರ | | | |
| | 2) ಸಹಕಾರಿ ಕ್ಷೇತ್ರ | | | |
| | 3) ಗಣಕಯಂತ್ರದ ಪರಿಜ್ಞಾನ | | | |
| | 4) ಕನ್ನಡ ಟೈಪಿಂಗ್ ಜ್ಞಾನ | | | |
| | 5) ಇತರೆ (ಪ್ರಮಾಣ ಪತ್ರ ಲಗತ್ತಿಸಿ) | | | |
| 8. | ನೌಕರಿಯಲ್ಲಿದ್ದರೆ ವಿವರ | | | |
| 9. | ಅರ್ಜಿ ಶುಲ್ಕ ಪಾವತಿಸಿದ ವಿವರ | | | |
| | | ಡಿ.ಡಿ.ನಂ................................ ದಿನಾಂಕ................................ ರೂ......................... | | |
| | | ಬ್ಯಾಂಕಿನ ಹೆಸರು................................................................... | | |

**:ಘೋಷಣೆ :**

ಅರ್ಜಿಯಲ್ಲಿ ನಮೂದಿಸಿರುವ ಎಲ್ಲಾ ವಿವರಗಳು ನನ್ನ ತಿಳುವಳಿಕೆ ಹಾಗೂ ಪರಿಜ್ಞಾನದಲ್ಲಿ ಸತ್ಯವೆಂದು ಪ್ರಾಮಾಣೀಕರಿಸಿ, ಸಹಿ ಮಾಡಿರುತ್ತೇನೆ. ಒಂದು ವೇಳೆ ಅದರಲ್ಲಿ ವ್ಯತ್ಯಾಸವಿದ್ದರೆ, ನಿಯಮದಂತೆ ಕ್ರಮ ಕೈಗೊಳ್ಳಬಹುದಾಗಿರುತ್ತದೆ.

ಆಡಕಗಳ ಸಂಖ್ಯೆ :

ದಿನಾಂಕ :
ಸ್ಥಳ :

ತಮ್ಮ ವಿಶ್ವಾಸಿ
(ಅಭ್ಯರ್ಥಿಯ ಹೆಸರು ಮತ್ತು ಸಹಿ)

---

**ಕಛೇರಿಯ ಉಪಯೋಗಕ್ಕಾಗಿ**

ಅರ್ಜಿ ತಲುಪಿದ ದಿನಾಂಕ .................................. ಸ್ವೀಕೃತಿ ಸಂಖ್ಯೆ :...................................